ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

ಅ) ದಿನಾಂಕ ೩೧-೩-೮೮ಕ್ಕೆ ಇದ್ದಂತೆ ಧಾರವಾಡ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯಲ್ಲಿ ೧೬೧೦ ಪಂಚಾಯ್ತಿ ದಾವಾ ಪ್ರಕರಣಗಳು ಬಾಕಿ ಇರುತ್ತದೆ.

ಆ) ಹೌದು.

ಇ) ಮುಖ್ಯ ಕಾರಣಗಳು ಈ ಕೆಳಕಾಣಿಸಿದಂತೆ ಇವೆ.

(ಅ) ಈ ಪ್ರಕರಣವು ಇತ್ಯರ್ಥಕ್ಕಾಗಿ ಬಾಕಿಯಿದ್ದಾಗ ಕರ್ನಾಟಕ ಸರ್ಕಾರವು ಪುನರ್ ಪರಿಶೀಲನಾ ಅರ್ಜಿಗೆ ಸಂಬಂಧಿಸಿದಂತೆ ಪಂಚಾಯ್ತಿ ದಾವಾ ಪ್ರಕರಣದ ನಡವಳಿಗಳಿಗೆ ದಿನಾಂಕ ೨೯-೧೨-೧೯೮೧ರಂದು ತಡೆಯಾಜ್ಞೆ ನೀಡಿತು. ತಡೆಯಾಜ್ಞೆ ಕ್ರಮ ಸಂಖ್ಯೆ /ಆರ್‌ಡಿಸಿ/೩೩೩/ಸಿಎಪಿ/೮೧/ಎಂಬುದಾಗಿದೆ. ಮೇಲ್ಕಾಣಿಸಿದ ಪುನರ್ ಪರಿಶೀಲನಾ ಅರ್ಜಿಯನ್ನು ದಿನಾಂಕ ೧೮-೯-೧೯೮೪ರಂದು ವಜಾ ಮಾಡಲ್ಪಟ್ಟಿದೆ (ಕ್ರಮಸಂಖ್ಯೆ/ಆರ್‌ಡಿಸಿ/೩೩೩/ಸಿಎಪಿ/೮೧ ದಿನಾಂಕ ೧೩-೩-೧೯೮೫) ತದನಂತರ ಪ್ರಕರಣದ ನಡವಳಿಕೆಗಳನ್ನು ಮುಂದುವರಿಸಲಾಗಿದೆ. ಹಾಗೂ ಪ್ರಕರಣದ ವಿಚಾರಣೆಯನ್ನು ನಿಯಮಿತವಾಗಿ ನಡೆಸಲಾಗುತ್ತಿದ್ದು ಈಗ ಮುಂದಿನ ವಿಚಾರಣಾ ದಿನವನ್ನು ದಿನಾಂಕ ೨೮-೦೫-೧೯೮೮ರಂದು ನಿಗದಿಪಡಿಸಲಾಗಿದೆ.

(ಬ) ವಾದಿ ಮತ್ತು ಪ್ರತಿವಾದಿಗಳಿಗೆ ಅವರುಗಳ ವಕೀಲರು ಮುಖಾಂತರ ಪಾದವನ್ನು ಮಂಡಿಸಲು ಸಾಕಷ್ಟು ಅವಕಾಶ ಕೊಟ್ಟು ಪ್ರಕರಣದ ವಿಚಾರಣೆ ನಡೆಸಬೇಕಾಗಿರುವುದರಿಂದಲೂ ಮತ್ತು ಸಿವಿಲ್ ನ್ಯಾಯಾಲಯದ ವಿಧಿ ವಿಧಾನಗಳನ್ನನುಸರಿಸಬೇಕಾಗಿರುವುದರಿಂದಲೂ ಮತ್ತು

(ಕ) ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಿಕ ಸ್ವರೂಪದ (ಕ್ವಾಜಿ ಜೂಡಿಸಿಯಲ್) ಕಾರ್ಯಗಳನ್ನು ಉಪವಿಭಾಗದ ಇತರೆ ಹಲವಾರು ಆಡಳಿತಾತ್ಮಕ ಕಾರ್ಯ ಕಲಾಪಗಳೊಂದಿಗೆ ನಿಷ್ಪಹಿಸಬೇಕಾಗುವುದು. ಆದ್ದರಿಂದ ಸದರಿ ಕೇಸನ್ನು ಇನ್ನೂ ತೀರ್ಮಾನಿಸಲಾಗಿಲ್ಲ.

ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರ ಸರ್ಕಾರದ ಅನುದಾನ ಕುರಿತಂ

೧೧೮೨. ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳಿಗೆ ೧೯೮೬ ರಿಂದ ೧೯೮೮ರವರೆಗೆ ಮಂಜೂರಾಗಿರುವ ಮೊತ್ತವೆಷ್ಟು? (ಪ್ರತಿವರ್ಷ ಬಿಡುಗಡೆ ಮಾಡಲಾದ ಹಣದ ವಿವರ ಒದಗಿಸುವುದು).

ಆ) ಹಾಗಿದ್ದಲ್ಲಿ, ಸದರಿ ಕಾರ್ಯಕ್ರಮಗಳಿಗೆ ಪೂರ್ಣ ಹಣ ಬಿಡುಗಡೆ ಮಾಡದೇ ಇರಲು ಕಾರಣಗಳೇನು ?

ಇ) ಸದರಿ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು)—

ಅ) (ರೂ. ಲಕ್ಷಗಳಲ್ಲಿ)

ವರ್ಷ	ಸಮಾಜ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಕೇಂದ್ರದ ಪಾಲು.	ಕೇಂದ್ರದ ವಿಶೇಷ ಧನ ಸಹಾಯ	
		ವಿಶೇಷ ಘಟಕ ಯೋಜನೆ.	ಗಿರಿಜನ ಉಪ ಯೋಜನೆ.
೧೯೮೫-೮೬	೧೬೮.೬೯	೮೨೭.೮೯	೧೪೮.೧೩
೧೯೮೬-೮೭	೩೦೦.೫೫	೧೨೧೫.೮೭	೧೩೦.೨೬
೧೯೮೭-೮೮	೧೪೭.೧೩	೧೦೫೬.೪೪	೧೪೨.೫೯

ಆ) ಪೂರ್ಣ ಹಣ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಅಬ್ದುಲ್ ನಜೀರ್ ಸಾಬ್.— ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸಲಾಗುವ ಇಪ್ಪತ್ತಾಲ್ಕನೆಯ ಪಟ್ಟಿಯನ್ನು ಸಭೆಯ ಮುಂದಿಡಬಯಸುತ್ತೇನೆ.

ಅಧ್ಯಕ್ಷರು.— ಲಿಖಿತಮೂಲಕ ಉತ್ತರಿಸಲಾದ ಪ್ರಶ್ನೆಗಳ ಇಪ್ಪತ್ತಾಲ್ಕನೆಯ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಚಿಕ್ಕಗಲಗಲಿ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ

೧೨೩೭. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಚಿಕ್ಕಗಲಗಲಿಯ ನಿಯೋಜಿತ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕೇಂದ್ರ ಸರ್ಕಾರದಿಂದ ರಹದಾರಿ ಸಿಕ್ಕಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈವರೆಗೆ ಈ ಕಾರ್ಖಾನೆಯ ಸ್ಥಾಪನೆಗಾಗಿ ರೈತರಿಂದ ಸಂಗ್ರಹವಾದ ಷೇರು ಹಣವೆಷ್ಟು?

ಇ) ಕಾರ್ಖಾನೆ ಅತ್ಯಂತ ಶೀಘ್ರವಾಗಿ ಆರಂಭವಾಗಲು ಅನುಕೂಲವಾಗುವಂತೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಕಾರ್ಖಾನೆಯ ಸ್ಥಾಪನೆಗಾಗಿ ವಶಪಡಿಸಿಕೊಳ್ಳಲಾದ ಜಮೀನಿನ ವಿಸ್ತೀರ್ಣವೆಷ್ಟು?

ಉ) ವಿಜಾಪುರ ಜಿಲೆಯಿಂದ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಹೋಗುವ ಕಬ್ಬಿನ ಪ್ರಮಾಣವೆಷ್ಟು?

ಶ್ರೀ ಜೆ.ಹೆಚ್. ಪಟೇಲ್(ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ಹೌದು.

ಆ) ದಿನಾಂಕ ೩೦-೩-೧೯೮೭ರ ಅಂತ್ಯಕ್ಕೆ ಕಾರ್ಖಾನೆಯ ಸ್ಥಾಪನೆಗಾಗಿ ರೈತರಿಂದ ಸಂಗ್ರಹವಾದ ಒಟ್ಟು ಷೇರು ಹಣ ರೂ. ೬೫-೦೦ ಲಕ್ಷಗಳಾಗಿರುತ್ತೆ

ಇ) ಕಾರ್ಖಾನೆ ಅತ್ಯಂತ ಶೀಘ್ರವಾಗಿ ಆರಂಭವಾಗಲು ಅನುಕೂಲವಾಗುವಂತೆ ಸರ್ಕಾರ ಸದ್ಯಕ್ಕೆ ೧೨೭-೫೦ ಲಕ್ಷ ರೂ.ಗಳನ್ನು ಷೇರು ಬಂಡವಾಳವನ್ನಾಗಿ ಸದರಿ ಕಾರ್ಖಾನೆಗೆ ಮಂಜೂರು